# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯದಲ್ಲಿ , ಜಗಳೂರು.

ಸಿಸಿ ನಂಃ ೨೫೮/೧೭

ಫಿರ್ಯಾದಿದಾರರು : ಸರ್ಕಾರದ ಪರವಾಗಿ- ಜಗಳೂರು ಪೋಲೀಸ್,

**ವಿರುದ್ಧ**

ಆರೋಪಿತರುಃ

೧) ನಾಗರಾಜ ಬಿನ್ ಶರಣಪ್ಪ, ೩೫ ವರ್ಷ
ಹಾರಕಬಾವಿ ಹತ್ತಿರ, ಶಾಂತನಹಳ್ಳಿ ಗ್ರಾಮ
ಕೂಡ್ಲಿಗಿ ತಾಃ, ಬಳ್ಳಾರಿ ಜಿಲ್ಲೆ

೨) ನವೀನ್ ಬಿನ್ ಪ್ರಕಾಶಪ್ಪ, ೩೨ ವರ್ಷ
ಗಟ್ಟಿ ಹೊಸಹಳ್ಳಿ ಗ್ರಾಮ, ಹೊಳಲ್ಕೆರೆ ತಾಃ
ಚಿತ್ರದುರ್ಗ ಜಿಲ್ಲೆ

೩) ಬೋರಯ್ಯ ಬಿನ್ ಓಬಯ್ಯ, ೪೦ ವರ್ಷ
ಬುಡ್ಡನಹಟ್ಟಿ ಗ್ರಾಮ, ಚಳ್ಳಕೆರೆ ತಾಃ

೪) ನಿಂಗಪ್ಪ ವಿನ್ ಮುನಿಯಪ್ಪ, ೨೫ ವರ್ಷ,
ಹಾರಕಬಾವಿ ಗ್ರಾಮ, ಕೂಡ್ಲಿಗಿ ತಾಃ

## ಃ ದೋಷಾರೋಪಣೆ ಃ

ತಿಮ್ಮಯ್ಯ ಜಿ., ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ , ಜಗಳೂರು ಆದ ನಾನು, ಈ ಮೂಲಕ ನಿಮ್ಮ ಮೇಲೆ ಹೊರಿಸಿದ ಆಪಾದನೆ ಏನೆಂದರೆ,

ದಿನಾಂಕಃ 29-06-2016 ರಂದು ರಾತ್ರಿ ಜಗಳೂರು ತಾಲ್ಲೂಕು ಮಲೇಮಾಚಿಕೆರೆ ಗ್ರಾಮದ ಬಸ್ ನಿಲ್ದಾಣದ ಸೊಕ್ಕೆ-ಪಲ್ಲಾಗಟ್ಟೆ ರಸ್ತೆಯಲ್ಲಿರುವ ಶ್ರೀ ಬಸವೇಶ್ವರ ದೇವಸ್ಥಾನದ ಕಾಣಿಕೆ ಹುಂಡಿಯನ್ನು ಆರೋಪಿತರಾದ ನೀವುಗಳು ಕೆಎ-34/ಬಿ-2309 ಟಾಟಾ ಎಸಿಇ ವಾಹನದಲ್ಲಿ ಹೋಗಿ ದೇವಸ್ಥಾನಕ್ಕೆ ಹಾಕಿದ್ದ ಕಬ್ಬಿಣದ ಶಟ್ಟರ ಬೀಗ ಮುರಿದು ಒಳಗೆ ಪ್ರವೇಶ ಮಾಡಿ ಹುಂಡಿಯನ್ನು ಕಳ್ಳವು ಮಾಡಿ, ಕಳುವು ಮಾಡಿದ ಹುಂಡಿಯನ್ನು ದೇವಸ್ಥಾನದ ಹಿಂದೆ ಇರುವ ಅಡಿಕೆ ತೋಟಕ್ಕೆ ಹೋಗಿ ಅದರಲ್ಲಿ ಇದ್ದ ಭಕ್ತಾಧಿಗಳು ಹಾಕಿದ ಒಡವೆ ಮತ್ತು ಹಣವನ್ನು ಕಳುವು ಮಾಡಿರುವುದರಿಂದ ನನ್ನ ಸಂಜ್ಞೆಯೊಳಗೆ ಭಾ.ದಂ.ಸಂ. ಕಲಂ ೪೫೭ ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧ ಮಾಡಿರುತ್ತೀರಿ **ಅಂತಲೂ**

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವುಗಳು ಶ್ರೀ ಬಸವೇಶ್ವರ ದೇವಸ್ಥಾನದ ಕಾಣಿಕೆ ಹುಂಡಿಯನ್ನು ಕಳುವು ಮಾಡಿ, ಕಳುವು ಮಾಡಿದ ಹುಂಡಿಯನ್ನು ದೇವಸ್ಥಾನದ ಹಿಂದೆ ಇರುವ ಅಡಿಕೆ ತೋಟಕ್ಕೆ ಹೋಗಿ ಅದರಲ್ಲಿ ಇದ್ದ ಭಕ್ತಾಧಿಗಳು ಹಾಕಿದ ಒಡವೆ ಮತ್ತು ಹಣವನ್ನು ಕಳುವು ಮಾಡಿರುವುದರಿಂದ ನನ್ನ ಸಂಜ್ಞೆಯೊಳಗೆ ಭಾ.ದಂ.ಸಂ. ಕಲಂ ೩೮೦ ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧ ಮಾಡಿರುತ್ತೀರಿ ಅಂತಲೂ

ಈ ಮೇಲೆ ಹೇಳಿದ ಆರೋಪಗಳ ಬಗ್ಗೆ ನೀವು ವಿಚಾರಣೆಗೆ ಒಳಪಡಬೇಕೆಂದು ಈ ಮೂಲಕ ನಾನು ನಿರ್ದೇಶಿಸುತ್ತೇನೆ.

ದಿಃ ೨೪-೧೦-೨೦೧೮

ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,

ಜಗಳೂರು.